ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Karnatak University, Dharwad.
ಪರೀಕ್ಷಾ ವಿಭಾಗ
**Examination Section**

**"NAAC Accredited with "A" Grade 2014"**

ಗೌಪ್ಯ ಶಾಖೆ
Confidential Branch

ಫೋ.ನಂ. (O)0836-2215259
ಫ್ಯಾಕ್ಸ ನಂ. 0836-2741928

ನಂ. ಕವಿವಿ/ಪರೀಕ್ಷಾ(ಗೌಪ್ಯ)/2020/379

ದಿನಾಂಕ: 20.01.2020

## ಸುತ್ತೋಲೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಅಧೀನ ಹಾಗೂ ಸಂಲಗ್ನ ಬಿಬಿಎ/ಬಿಕಾಂ (ಸಿಎಸ್) ಮಹಾವಿದ್ಯಾಲಯದ ಪ್ರಾಚಾರ್ಯರಿಗೆ / ಸಂಯೋಜಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಪ್ರೋಜೆಕ್ಟ ರಿಪೋರ್ಟ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಬಿಬಿಎ/ಬಿಕಾಂ(ಸಿಎಸ್) 6ನೇ ಸೆಮಿಸ್ಟರಗೆ ಸಂಬಂಧಪಟ್ಟಂತೆ ಮೌಖಿಕ ಪರೀಕ್ಷೆಯನ್ನು ದಿನಾಂಕ **08.02.2020** ಅಥವಾ **09.02.2020** ರಂದು ಜರುಗಿಸಲು ತಿಳಿಸಲಾಗಿದೆ. ಪರೀಕ್ಷೆ ಜರುಗಿಸಿದ ನಂತರ ಅಂಕಗಳ ಯಾದಿಯನ್ನು ದ್ವಿಪ್ರತಿಯಲ್ಲಿ ಸಿದ್ಧಪಡಿಸಿ ಮೂಲ ಪ್ರತಿಯನ್ನು ಸಿಸ್ಟಿಮ್ ಅನ್ಯಾಲಿಸ್ಟ್, ಕಂಪ್ಯೂಟರ ವಿಭಾಗ ಇವರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಅಧೀಕ್ಷಕರು, ವಾಣಿಜ್ಯ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಕಳುಹಿಸಲು ತಿಳಿಸಲಾಗಿದೆ.

ಸ್ಥಳೀಯವಾಗಿ ಲಭ್ಯವಿರುವ ಜವಾಬ್ದಾರಿಯುತವಾದ ಸ್ಥಾನದಲ್ಲಿರುವ ಸ್ನಾತಕೋತ್ತರ ಪದವಿ ಪಡೆದ ವ್ಯಾಪಾರೋಧ್ಯಮಿಗಳು, ರಾಷ್ಟ್ರೀಕೃತ ಬ್ಯಾಂಕ ಮ್ಯಾನೇಜರು ಅಥವಾ ಚಾರ್ಟರ್ಡ ಅಕೌಂಟಂಟಗಳ ಕನಿಷ್ಠ 5 ಜನರ ಹೆಸರುಗಳನ್ನು ಈ ಕೆಳಗಿನ ನಮೂನೆಯಲ್ಲಿ ತಯಾರಿಸಿ ಅಧೀಕ್ಷಕರು ಗೌಪ್ಯವಿಭಾಗದ ಹೆಸರಿನಲ್ಲಿ ಹಾಗೂ ಗೌಪ್ಯಶಾಖೆಯ ಇ-ಮೇಲ್ **confidential@kud.ac.in** ಗೆ ಸಲ್ಲಿಸಲು ಸೂಚಿಸಲಾಗಿದೆ. ತಾವು ಸೂಚಿಸಿದ ನಂತರ ತಮ್ಮ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಸಾರವಾಗಿ ಕುಲಸಚಿವರು (ಮೌಲ್ಯಮಾಪನ) ಇವರು ಸೂಚಿಸುವ ಪರೀಕ್ಷಕರಿಂದ ಮೇಲೆ ತಿಳಿಸಿದ ದಿನಾಂಕದಂದು ಪರೀಕ್ಷೆಗಳನ್ನು ಜರುಗಿಸಲು ಸೂಚಿಸಲಾಗಿದೆ.

| ಬಿಬಿಎ ಮೌಖಿಕ ಪರೀಕ್ಷೆ ಜರುಗಿಸುವ ಪರೀಕ್ಷಕರ ಹೆಸರು | ವಿದ್ಯಾರ್ಹತೆ | ಸದರಿಯವರು ಕಾರ್ಯ ನಿರ್ವಹಿಸುವ ಸ್ಥಳ | ಮೌಖಿಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆ | ಮಹಾವಿದ್ಯಾಲಯಗಳ ಇ-ಮೇಲ್ ಮತ್ತು ದೂರವಾಣಿ ಸಂಖ್ಯೆ |
|---|---|---|---|---|
| | | | | |
| | | | | |

ಪರೀಕ್ಷಾ ವಿಭಾಗದಿಂದ ಹೊರಡಿಸಲಾದ ಅಧಿಸೂಚನೆ ಕವಿವಿ/ಪರೀಕ್ಷಾ/ಜಿಎಡಿ/2018-19/906 ದಿನಾಂಕ 12.09.2018 ರನ್ವಯ ಪ್ರತಿ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕದೊಂದಿಗೆ ಪ್ರೋಜೆಕ್ಟ ವೈವಾ ಶುಲ್ಕ ರೂ.485/-ನ್ನು ಸಂದಾಯಮಾಡಲು ಸೂಚಿಸಿದಂತೆ ಶುಲ್ಕದ ಚಲನ್ ಝರಾಕ್ಸ ಪ್ರತಿಯನ್ನು ಮೌಖಿಕ ಪರೀಕ್ಷೆ ಜರುಗಿಸಲು ಪರೀಕ್ಷಕರ ವಿವರ ನೀಡುವ ಅರ್ಜಿ ಜೊತೆಗೆ ಕಡ್ಡಾಯವಾಗಿ ಲಗತ್ತಿಸಲು ತಿಳಿಸಲಾಗಿದೆ ಹಾಗೂ ಮೌಖಿಕ ಪರೀಕ್ಷೆಗೆ ಹಾಜರಾಗುವ ಪರೀಕ್ಷಕರಿಗೆ ಟಿ.ಎ./ಡಿ.ಎ. ಹಾಗೂ ಸಂಭಾವನೆಯನ್ನು ಕ.ವಿ.ವಿ. ಕೈಪಿಡಿ ಸುತ್ತೋಲೆ ಕವಿವಿ/ಪರೀಕ್ಷಾ(ಗೌಪ್ಯ)/2017/1550 ದಿನಾಂಕ 06.12.2017ರ ಪ್ರಕಾರ ಪಾವತಿಸಲಾಗುವುದು. ಪರೀಕ್ಷಾ ಕಾರ್ಯ ಜರುಗಿಸಿದ ಪರೀಕ್ಷಕರ ಬಿಲ್ಲುಗಳನ್ನು ಸಿದ್ಧಪಡಿಸಿ ಕವಿವಿಗೆ ಸಲ್ಲಿಸಲು ಸೂಚಿಸಲಾಗಿದೆ.

ಪು.ತಿ.ನೋ

## ಟಿಎ/ಡಿಎ ಸಂಭಾವನೆಯನ್ನು ಈ ಕೆಳಗಿನಂತೆ ವಿತರಿಸುವುದು:

| | | | |
|---|---|---|---|
| 1. | ಬಾಹ್ಯ ಪರೀಕ್ಷಕರಿಗೆ | 1. ಪ್ರತಿ ಪ್ರೋಜೆಕ್ಟ ಮೌಲ್ಯಮಾಪನ ಸಂಭಾವನೆ | ರೂ.50/– (ಪ್ರತಿ ವಿದ್ಯಾರ್ಥಿಗೆ) |
| | | 2. ಪ್ರತಿ ಪ್ರೋಜೆಕ್ಟ ವೈವಾ ಸಂಭಾವನೆ | ರೂ.50/– (ಪ್ರತಿ ವಿದ್ಯಾರ್ಥಿಗೆ) |
| | | 3. ಸ್ಥಳೀಯರಿಗೆ ಸ್ಥಳೀಯ ಭತ್ಯೆ | ರೂ.800/– |
| | | 4. ಬೇರೆ ಊರಿನಿಂದ ಬಂದವರಿಗೆ | ರೂ.900/– + ಟಿಎ |
| 2. | ಆಂತರಿಕ ಪರೀಕ್ಷಕರಿಗೆ | ಸ್ಥಳೀಯ ಭತ್ಯೆ | ರೂ.800/– |
| 3. | ಲ್ಯಾಬ್ ಅಸಿಸ್ಟಂಟ್ | ಸ್ಥಳೀಯ ಭತ್ಯೆ | ರೂ.250/– (ಒಂದು ಸೆಷನ್) |
| 4. | ಸಿಪಾಯಿ | ಸ್ಥಳೀಯ ಭತ್ಯೆ | ರೂ.200/– (ಒಂದು ಸೆಷನ್) |

ಸಹಿ ಇದೆ
ಕುಲಸಚಿವರು (ಮೌಲ್ಯಮಾಪನ)

ಗೆ,
ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಟ್ಟ ಎಲ್ಲ ಅಧೀನ ಹಾಗೂ ಸಂಲಗ್ನ ಬಿಬಿಎ/ಬಿಕಾಂ(ಸಿಎಸ್) ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ / ಸಂಯೋಜಕರಿಗೆ.

**ಪ್ರತಿ ಮಾಹಿತಿಗಾಗಿ :**

1. ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಉಪ ಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ/ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಸಿಸ್ಟಮ್ ಅನ್ಯಾಲಿಸ್ಟ್, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಅಧೀಕ್ಷಕರು, ಪರೀಕ್ಷಾ ವಿಭಾಗದ ಜಿ.ಎ.ಡಿ. / ವಾಣಿಜ್ಯ ಶಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
5. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ., ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.